# ಅಮ್ಮನ ಸನ್ನಿಧಿಯಲ್ಲಿ ಹಗುರ ಮನ, ಹೊಸ ಕನಸು



ಕಾರಿನಿಂದ ಇಳಿದುಬಂದ ಸೌಂದ್ರಾಳ ಪತಿ, 'ಇವರು ನಿಮಗೆ ತೊಂದರೆ ಕೊಡಲಿಲ್ಲ ತಾನೆ?' ಎಂದು ಕೇಳಿದ. ನಾನು ಅಸಹಜತೆಯನ್ನು ಅನುಭವಿಸಿದೆ. ಏನೆಂದು ಉತ್ತರಿಸಲಿ? ನಾನು ಕೇವಲ ಮುಗುಳ್ನಕ್ಕೆ, ಅಷ್ಟೆ. ಮಕ್ಕಳನ್ನು ಸೌಂದ್ರಾಳಿಗೆ ಒಪ್ಪಿಸಿದ ನಂತರ ನಾನು ಮತ್ತೆ ಒಂಟಿಯಾಗಿದ್ದೆ. ಈಗ ನನ್ನ ಮುಂದಿನ ಪ್ರಯಾಣ ಗ್ಲಾಸ್ಗೋ ಆಗಿದ್ದರಿಂದ ಕಾರನ್ನು ಆ ದಿಕ್ಕಿಗೆ ಹೊರಳಿಸಿದೆ. ಅದು ಎರಡೂವರೆ ಗಂಟೆಯ ಪ್ರಯಾಣವಾಗಿತ್ತು.

ಮಂದಿರವನ್ನು ತಲುಪಲು ಇನ್ನೆಷ್ಟು ಗಂಟೆ ಉಳಿದಿದೆ? ನಕ್ಷೆಯಲ್ಲಿ ನೋಡುತ್ತಾ ಅಂದಾಜು ಮಾಡಿದೆ; ಒಂದು ವೇಳೆ ಇದೇ ವೇಗದಲ್ಲಿ ಸಾಗಿದರೆ ಬಹುಶಃ ಆರೇಳು ಗಂಟೆಗಳು ಹಿಡಿಯಬಹುದು. ನಿಶ್ಶಬ್ದ ಪ್ರಕೃತಿಯಲ್ಲಿ ಒಂಟಿಯಾಗಿ ಪಾದಯಾತ್ರೆಯನ್ನು ಮಾಡುವುದರಿಂದ ಜಗತ್ತು, ಪ್ರಕೃತಿ ಮತ್ತು ನನ್ನನ್ನು ನಾನೇ ಅರಿತುಕೊಳ್ಳಲು ಸಾಕಷ್ಟು ಸಮಯ ಲಭಿಸುತ್ತದೆ ಎಂಬುದನ್ನು ಮನಗಂಡೆ. ಈ ಯಾನದಲ್ಲಿ, ಮನುಷ್ಯನಿಗೆ ದೊಡ್ಡ ದೊಡ್ಡ ವಿಷಯಗಳಿಂದ ಸಂತೋಷ ಲಭಿಸದೆ ಸಣ್ಣಪುಟ್ಟ ವಿಷಯಗಳಿಂದಲೂ ಲಭಿಸುತ್ತದೆ ಎಂಬುದನ್ನೂ ಮನಗಾಣುತ್ತಿದ್ದೇನೆ. ನೀರಡಿಕೆಯಿಂದ ಬಳಲುವ ಪ್ರಾಣಿಗೆ ನೀರು ಮಾತ್ರ ಬೇಕು, ಹಸಿವೆಯಿಂದ ಬಳಲುತ್ತಿರುವವನಿಗೆ ಆಹಾರ ಮಾತ್ರ ಬೇಕು, ದಣಿದ ಪ್ರಯಾಣಿಕನಿಗೆ ವಿಶ್ರಾಂತಿ ಮಾತ್ರ ಬೇಕು. ಕಾಲುಗಳನ್ನು ಚಾಚಿ, ನಂತರ ಚಕ್ಕಳಬಕ್ಕಳ ಹಾಕಿ ಒಂದು ಕಡೆ ಎರಡು ಕ್ಷಣ ಕೂತೆ; ಈಗ ಚಿರ ಆನಂದ ಲಭಿಸುತ್ತಿದೆ. ಒಣಗಿದ ಗಂಟಲಿಗೆ ಸ್ವಚ್ಛ ನೀರಿನ ಹನಿಗಳು... ಓಹ್, ತೃಪ್ತಿಯೆನಿಸುತ್ತಿದೆ.

ನನ್ನನ್ನು ಬೆಳದಿಂಗಳು ಮತ್ತು ಚಿಂತನೆ ಏಕಕಾಲದಲ್ಲಿ ವ್ಯಾಕುಲಗೊಳಿಸುತ್ತಿವೆ.

ಬೆಳದಿಂಗಳಿನಲ್ಲಿ ಸೌಂದರ್ಯವಿದೆ; ಇದು ಕಣ್ಣು ರೆಪ್ಪೆ ಮುಚ್ಚುವುದನ್ನು ತಡೆಯುತ್ತದೆ, ಚಿಂತನೆಯಲ್ಲಿ ನೆನಪುಗಳಿವೆ, ಇದು ವಿಚಾರಗಳ ವಾಹನವನ್ನೇರಿ ಬರುತ್ತಿದೆ. ಆತ್ಮ–ಪರಮಾತ್ಮ, ಶ್ರದ್ಧೆ, ಭರವಸೆಗಳು, ಅಪೇಕ್ಷೆಗಳು, ಜೀವನದ ಅಂಧಕಾರ ಮತ್ತು ಬೆಳಕಿನ ಮಗ್ಗಲುಗಳು, ಮನುಷ್ಯನ ಸ್ವಭಾವದ ವಿಕೃತಿಗಳು, ಮನುಷ್ಯನ ನೀಚತನ, ಮನುಷ್ಯನ ಸಣ್ಣತನ, ಅಸಹಾಯಕತೆ, ಜೀವನದ ವಿಷಮತೆಗಳು, ಜೀವನದ ಪರಿಧಿ–ವಿಸ್ತಾರ, ಮನಸ್ಸಿನಲ್ಲಿ ಉದ್ಭವಿಸುವ ಪ್ರಶ್ನೆಗಳು. ಹೀಗೆ ಮನಸ್ಸು ಕಳೆದ ಸಂಗತಿಗಳು ಮತ್ತು ಭವಿಷ್ಯದ ಯೋಜನೆಗಳ ವಿಚಾರಗಳಲ್ಲಿ ಮುಳುಗೇಳುತ್ತಿದೆ. ಓಹ್, ಮನುಷ್ಯನ ಜೀವನ ಅದೆಷ್ಟು ಸಮಸ್ಯೆಗಳಿಂದ ಆವರಿಸಿದೆ! ಯಾವ ಜೀವನವೂ ಸಮತಲವಾಗಿರುವುದಿಲ್ಲ. ಜಗತ್ತು ಅತಿ ವೇಗದಿಂದ ಬದಲಾಗುತ್ತಿದೆ, ಜೀವನ ಅದರೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಅದರ ಹಿಂದೆ ಓಡುತ್ತಿದೆ. ಜಗತ್ತು ಮತ್ತು ಜೀವನ. ಈ ಎರಡರ ಅತಿ ವೇಗ.

ಮೆಲ್ಲನೆ ನಡಿಗೆಯಲ್ಲಿ ನಾನು ಹಳೆಯ ಕಾಲದ ವ್ಯಕ್ತಿಯಾಗಿದ್ದೇನೆ; ಅಂದರೆ ಓಲ್ಡ್ ಫ್ಯಾಷನ್ಡ್. ಹೀಗೆಂದು ನನ್ನನ್ನು ನೀನಾ ಕರೆಯುತ್ತಿದ್ದಳು, ಸೌಂದ್ರಾ ಸಹ ಕರೆಯುತ್ತಿದ್ದಳು.

### ವಂಶ ಪರಂಪರಾಗತ ಮನೆ

ಗ್ರಾಂಟ್ ರೋಡ್, ಗ್ಲಾಸ್ಗೋದಲ್ಲಿ ಅಮ್ಮ ನಮ್ಮ ವಂಶ ಪರಂಪರಾಗತ ಮನೆಯಲ್ಲಿ ಈಗಲೂ ವಾಸಿಸುತ್ತಿದ್ದಳು. ಈ ಮನೆಯನ್ನು ನನ್ನ ಅಜ್ಜ ಕಟ್ಟಿಸಿದ್ದರು. ಅಜ್ಜ ನಿಧನರಾದ ನಂತರ ನಾವಿಲ್ಲಿಗೆ ಶಿಫ್ಟ್ ಆಗಿದ್ದೆವು. ನನ್ನ ತಂದೆಗೆ ತಂಗಿಯೊಬ್ಬರಿದ್ದು ಅವರು ಸದಾ ಎಲ್ಗಿನ್‌ನಲ್ಲಿರುತ್ತಿದ್ದರು. ಹೀಗಾಗಿ ಅಜ್ಜ ನಿಧನರಾದ ನಂತರ ಈ ಮನೆ ನನ್ನ ತಂದೆಗೆ ಉತ್ತರಾಧಿಕಾರದಲ್ಲಿ ಲಭಿಸಿತು. ಆಗ ನನಗೆ ಅಲಾನನಂತೆ ಹನ್ನೆರಡು ವರ್ಷವಾಗಿತ್ತು; ಆಗಲೇ ನಾವು ಪರ್ಥ್‌ನಿಂದ ಗ್ಲಾಸ್ಗೋಗೆ ಶಿಫ್ಟ್ ಆಗಿದ್ದೆವು. ನನ್ನ ಹನ್ನೆರಡು ವಯಸ್ಸಿನಿಂದ ಇಪ್ಪತ್ತು ವಯಸ್ಸಿನ ಜೀವನ ಇದೇ ಮನೆಯಲ್ಲಿ ಕಳೆಯಿತು. ತದನಂತರವೂ ನಾನು ಇಲ್ಲಿಗೆ ನಿಯಮಿತವಾಗಿ ಬರುತ್ತಿರುತ್ತೇನೆ. ನಾನು ಈ ನಗರಕ್ಕೆ ಬಂದಾಗ ಬಾಲ್ಯದ ದಿನಗಳು ಹಸುರಾಗುತ್ತವೆ.